**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 82/2014**

**ಪಿರ್ಯಾದಿದಾರರುಃ** ರಾಜ್ಯದ ಪರವಾಗಿ
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತ/ರುಃ** ಸತೀಶ ಬಿನ್ ಕೇಶವಮೂರ್ತಿ,
30 ವರ್ಷ ವಯಸ್ಸು,
ವಾಸಃ ಸಮುದಾಯಭವನ ಸರ್ಕಲ್ ಹತ್ತಿರ,
ಆಡುವಳ್ಳಿ ಬಡಾವಣೆ, ಹಾಸನ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

**ಪ್ರಶ್ನೆ ಃ 1.** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ ?

**ಉತ್ತರ ಃ ಕೇಳಿಸಿಕೊಂಡಿದ್ದೇನೆ**

**ಪ್ರಶ್ನೆ ಃ 2.** ಪ್ರಾಸಾ.1 ದೊರೆ ಉಃ ಲಕ್ಷ್ಮಿನಾರಾಯಣ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, .ದಿನಾಂಕ 01.02.2013 ರಂದು ಬೆಳಗ್ಗೆ 9.00 ರಿಂದ 9.30 ಕ್ಕೆ ಚನ್ನರಾಯಪಟ್ಟಣ ಬಿಟ್ಟು ತಮ್ಮ ತಮ್ಮನ ಅತ್ತೆಯ ಆರಾಧನ ಇದ್ದ ಕಾರಣ ಹಾಸನಕ್ಕೆ ಹೋಗಿದ್ದೆವು. ಮನೆಯ ಬಾಗಿಲು ಲಾಕ್ ಮಾಡಿಕೊಂಡು ಹೋಗಿದ್ದೆವು. ಸಂಜೆ 5.30 ಕ್ಕೆ ವಾಪಸ್ಸು ಬಂದು ಮುಂಭಾಗಿಲಿನ ಲಾಕ್ ಓಪನ್ ಮಾಡಿಕೊಂಡು ಒಳಗೆ ಹೋದಾಗ ಹಿಂಬಾಗಿಲಿನ ಬಾಗಿಲು ತೆರೆದಿತ್ತು. ಹತ್ತಿರ ಹೋಗಿ ನೋಡಿದಾಗ ಆಯುಧದಿಂದ ಮೀಟಿ ಬಾಗಿಲು ತೆಗೆದಿರುವುದು ಕಂಡು ಬಂತು. ನಂತರ ಬೆಡ್ ರೂಮಿ ಗೆ ಹೋಗಿ ಪರಿಶೀಲಿಸಿದಾಗ ವಾರ್ಡ್ ರೂಬ್ ತೆಗೆದು ಅದರಲ್ಲಿನ ಬಟ್ಟೆ ಮತ್ತು ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದು ಕಂಡು ಬಂತು. ಒಡವೆ ಇದ್ದ ಬಾಕ್ಸ್ ತೆಗೆದು ನೋಡಿದಾಗ, ಅದರಲ್ಲಿದ್ದ ನಾಲ್ಲು ಜೊತೆ ಓಲೆ, ಒಂದು ಬೇಬಿ ಓಲೆ, ಮೂರು ಉಂಗುರ, ಒಂದು ಚಿನ್ನದ ನೆಕ್ಲೇಸ್ ಸರ ಮತ್ತು 5 ಸಾವಿರ ಹಣ ಕಾಣೆಸಲಿಲ್ಲ. ನಂತರ ತಾವು ಠಾಣೆಗೆ ಹೋಗಿ ದೂರು

ನೀಡಿದೆವು. ಮಾರನೆ ಬೆಳಿಗ್ಗೆ 9.30 ಕ್ಕೆ ಪೋಲೀಸರು ತಮ್ಮ ಮನೆಗೆ ಬಂದು ಚಾಸಾ.2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಕ್ರಮ ಜರುಗಿಸಿದರು. ಮಹಜರ್ ಗೆ ತಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2 ರ ಸಂತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿನಾಂಕ 21.11.2013 ರಂದು ಪೋಲೀಸರು ತಮ್ಮನ್ನು ಠಾಣೆಗೆ ಕರೆದು, ತಮ್ಮ ಮನೆಯಿಂದ ಕಳ್ಳತನವಾಗಿದ್ದ ಒಡವೆಗಳನ್ನು ತೋರಿಸಿದರು. ಅದೇ ರೀತಿ ಅಲ್ಲಿದ್ದ ಆರೋಪಿಯನ್ನು ತನಗೆ ತೋರಿಸಿ ಆತನೇ ನಿಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದು ಎಂದು ಹೇಳಿದರು. ಪೋಲೀಸರು ತನಗೆ ತೋರಿಸಿದ ಆಸಾಮಿ ಸತೀಶ ಇಂದು ನ್ಯಾಯಾಲಯ ಮುಂದೆ ಇರುವ ಆರೋಪಿಯಾದ ನೀವೇ ಆಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ : ಸುಳ್ಳು**

**ಪ್ರಶ್ನೆ : 3.** ಪ್ರಾಸಾ.2 ಗಿರೀಶ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನಿಪಿ.2 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿ, ಸದರಿ ಸಹಿಯನ್ನು ತಾನು ದಿನಾಂಕ 02.02.2013 ರಂದು ಆದರ್ಶ ನಗರ 2 ನೇ ಕ್ರಾಸ್ ಚನ್ನರಾಯಪಟ್ಟಣದ ಚಾಸಾ.1 ರವರ ಮನೆಯ ಹತ್ತಿರ ಪೋಲೀಸರು ಕಳ್ಳತನವಾಗಿದೆ ಎಂಬ ವಿಷಯ ಸಂಬಂಧ ಬಂದಿದ್ದರು, ಆಗ ಅಲ್ಲಿ ಪೋಲೀಸರು ಕೃತ್ಯ ಸ್ಥಳ ಮಹಜರ್ ಜರುಗಿಸಿದರು. ಮಹಜರ್ ಅನ್ನು ಬೆಳಗ್ಗೆ 9.00 ರಿಂದ 10.30 ರವರೆಗೆ ಮಾಡಿದ್ದಾರೆ. ಆ ಕಾಲಕ್ಕೆ ಚಾಸಾ.3 ಮತ್ತು ಸಾಕಷ್ಟು ಜನರು ಇದ್ದರು. ತಾನು ನಿಪಿ.2 ರ ಸಂಗತಿಗಳನ್ನು ತಿಳಿದುಕೊಂಡು ಘಟನಾ ಸ್ಥಳದಲ್ಲಿ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ : ಸುಳ್ಳು**

**ಪ್ರಶ್ನೆ : 4.** ಪ್ರಾಸಾ.3 ಭೈರಾಜು ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನಿಪಿ.2 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಸದರಿ ಸಹಿಯನ್ನು ದಿಃ 02.02.2013 ರಂದು ವಿವೇಕಾನಂದ ನಗರದ ಚಾಸಾ.1 ರವರ ಮನೆಯ ಹತ್ತಿರ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ. ಚಾಸಾ.1 ರವರ ಮನೆಯಲ್ಲಿ ಕಳ್ಳತನವಾಗಿದ್ದ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದಿದ್ದು, ಕಳ್ಳತನವಾಗಿರುವ ವಿಚಾರವನ್ನು ಬರೆದುಕೊಂಡು ತನ್ನ ಸಹಿ ಪಡೆದಿರುತ್ತಾರೆ. ಮಹಜರ್ ನ್ನು ಬೆಳಿಗ್ಗೆ 09.00 ರಿಂದ 10.00 ಗಂಟೆಯವರೆಗೆ ಬರೆದಿರುತ್ತಾರೆ. ನಿಪಿ.2 ರಲ್ಲಿ

ಬರೆದಿರುವ ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಓದಿ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :** ಸುಳ್ಳು

**ಪ್ರಶ್ನೆ : 5.** ಪ್ರಾಸಾ.6 ಜಯಂತ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನಿಪಿ.3 ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿ, ಸದರಿ ಸಹಿಯನ್ನು 8 ರಿಂದ 10 ವರ್ಷಗಳ ಹಿಂದೆ ಹಾಸನದಲ್ಲಿರುವ ನಮ್ಮ ಚಿನ್ನದ ಅಂಗಡಿಯಾದ ಮಂಗಳದೀಪ್ ನಲ್ಲಿ ಪೋಲೀಸರು ಕಳ್ಳತನವಾದ ಚಿನ್ನವನ್ನು ತೂಕಮಾಡಿ ತನ್ನ ಪಡೆದಿರುತ್ತಾರೆ. ಆಗ ಸಮಯ ಮಧ್ಯಾಹ್ನ 3.30 ರಿಂದ 4.30 ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :** ಸುಳ್ಳು

**ಪ್ರಶ್ನೆ : 6.** ಪ್ರಾಸಾ.8 ಉತ್ತಮ್ ಕುಮಾರ್ ಹೆಚ್.ಪಿ. ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನಿಪಿ.7 ರಲ್ಲಿರುವ ಸಹಿಯನ್ನು ಗುರುತಿಸಿ, ಸದರಿ ಸಹಿಯನ್ನು 2013 ರಲ್ಲಿ ಪೋಲೀಸರು ಹಾಸನದಲ್ಲಿರುವ ತನ್ನ ಚಿನ್ನದ ಅಂಗಡಿ ಉತ್ತಮ್ ಜ್ಯುವೆಲರ್ಸ್ ಗೆ ಬಂದಿದ್ದು, ಆ ಸಮಯದಲ್ಲಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :** ಸುಳ್ಳು

**ಪ್ರಶ್ನೆ : 7.** ಪ್ರಾಸಾ.10 ವಿದ್ಯಾಶಂಕರ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ಅದನ್ನು ನಿಪಿ.3 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿ, ಸದರಿ ಸಹಿಯನ್ನು 2013 ರಲ್ಲಿ ಚನ್ನರಾಯಪಟ್ಟಣದ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಚಾಸಾ.1 ರವರಿಗೆ 4 ಜೊತೆ ಚಿನ್ನದ ಓಲೆ, 3 ಚಿನ್ನದ ಉಂಗುರಗಳು ಮತ್ತು 1 ಚಿನ್ನದ ನೆಕ್ಲೇಸ್ ನ್ನು ಬಿಡುಗಡೆಗೊಳಿಸುವ ಸಂಬಂಧ ಮಾಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 11.00 - 12.00 ಗಂಟೆಯಾಗಿತ್ತು. ಅದಕ್ಕೆ ಚಾ ಸಾ.1 ಮತ್ತು 14 ರವರು ಸಹಿ ಮಾಡಿರುತ್ತಾರೆ. ಸದರಿ ಒಡವೆಗಳ ಛಾಯಾಚಿತ್ರ ಮತ್ತು ಅವರ ಭಾವಚಿತ್ರವನ್ನು ನೋಡಿ ಗುರುತಿಸಿ, ಆ ಬಗ್ಗೆ ಪೋಲೀಸರಿಗೆ ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :** ಸುಳ್ಳು

**ಪ್ರಶ್ನೆ : 8.** ಪ್ರಾಸಾ.13 ಶ್ರೀಧರ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ನಿಪಿ.13 ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿ, ಸದರಿ ಸಹಿಯನ್ನು ದಿಃ 15.12.2013 ರಂದು ನಗರ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಒಡವೆಗಳನ್ನು ಬಿಡುಗಡೆ ಮಾಡುವ ಸಂಬಂಧ ಮಾಡಿರುತ್ತೇನೆ. ತನ್ನ ಜೊತೆ ನಿಪಿ.2 ಕ್ಕೆ ಚಾಸಾ.1 ರವರು ಸಹಿ ಮಾಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.00 ರಿಂದ 12.00 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ. ಎಪಿಪಿ ರವರ ಪಾಟೀ ಸವಾಲಿನಲ್ಲಿ, ಈ ಪ್ರಕರಣದ ಆರೋಪಿಯಾದ ಸತೀಶ್ ರವರಿಂದ ಕಳ್ಳತನವಾದ ಆಭರಣಗಳನ್ನು ಅಮಾನತ್ತುಪಡಿಸಿಕೊಂಡಿದ್ದು, ಅವುಗಳನ್ನು ಚಾಸಾ.1 ರವರ ಬಿಡುಗಡೆ ಗೊಳಿಸಲು ಪಂಚರಾಗಿ ಬರುವಂತೆ ತನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ಆ ದಿನ ತನ್ನ ಸಮಕ್ಷಮ 4.200 ಗ್ರಾಂ ಮಿಲಿಯ ಒಂದು ಜೊತೆ ಜೇಡ ಮತ್ತು ಹವಳದ ಓಲೆ, 3.850 ಗ್ರಾಂ ತೂಕದ ಒಂದು ಜೊತೆ ಚಿನ್ನದ ರೂಬಿ ಹರಳಿನ ಓಲೆ, 4.200 ಗ್ರಾಂ ತೂಕದ ಒಂದು ಜೊತೆ ಜೇಡ ಹರಳಿನ ಓಲೆ, 3.200 ಗ್ರಾಂ ನ ಒಂದು ಜೊತೆ ಚಿನ್ನದ ಹವಳದ ಓಲೆ, 4.530 ಗ್ರಾಂ ನ ಒಂದು ಬಿಳಿ ಹರಳಿನ ಚಿನ್ನದ ಉಂಗುರ, 1.980 ಗ್ರಾಂನ ಎರಡು ಚಿನ್ನದ ಬೇಬಿ ರಿಂಗ್ ಮತ್ತು ಒಂದು 8.980 ಗ್ರಾಂನ ಒಂದು ಚಿನ್ನದ ನಕ್ಲೇಸ್ ಸೇರಿ ಒಟ್ಟು 7 ಚಿನ್ನದ ವಡವೆಗಳನ್ನು ಚಾಸಾ.1 ರವರ ಪರವಾಗಿ ನಿಪಿ.13 ರಂತೆ ಮಹಜರ್ ಮಾಡಿ ಬಿಡುಗಡೆಗೊಳಿಸಲಾಗಿರುತ್ತದೆ ಎಂದರೆ ಸರಿ. ಆ ದಿನ ತನ್ನ ಜೊತೆ ನಿಪಿ.13 ಕ್ಕೆ ಚಾಸಾ.1 ಮತ್ತು 13 ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ :** ಸುಳ್ಳು

**ಪ್ರಶ್ನೆ : 9.** ಪ್ರಾಸಾ.11 ದಿನೇಶ ಎಂ. ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 18.11.2013 ರಂದು ತಾನು ಮತ್ತು ಚಾಸಾ.17 ರವರು ಮೈಸೂರು ರಸ್ತೆ, ಮಾರೇನಹಳ್ಳಿ, ಗಾಯತ್ರಿ ಬಡಾವಣೆ, ಹೌಸಿಂಗ್ ಬೋರ್ಡ್ ಗಳಲ್ಲಿ ರಾತ್ರಿ ಗಸ್ತು ಮಾಡುತ್ತಿದ್ದಾಗ, ದಿಃ 19.11.2013 ರಂದು ಬೆಳಗ್ಗಿನ ಜಾವ 4.00 ಗಂಟೆ ಸಮಯದಲ್ಲಿ ಮೈಸೂರು ರಸ್ತೆಯ ರೈಲ್ವೆ ಬ್ರಿಡ್ಜ್ ಬಳಿ ಒಬ್ಬ ಆಸಾಮಿಯು ಒಂದು ಬೈಕನ್ನು ತಳ್ಳಿಕೊಂಡು ಬರುತ್ತಿದ್ದು, ಆತನನ್ನು ತಡೆದು ವಾಹನದ ದಾಖಲಾತಿ ಕೇಳಲಾಗಿ, ಆತ ಓಡಿ ಹೋಗಲು

ಪ್ರಯತ್ನಿಸಿದ್ದು, ಆತನನ್ನು ನಾವು ಹಿಡಿದುಕೊಂಡು, ಆತನನ್ನು ಪ್ರಶ್ನೆ ಮಾಡಲಾಗಿ, ಆತನ ಹೆಸರು ಸತೀಶ್ ಉಃ ಸತಿ ಬಿನ್ ಕೇಶವಮೂರ್ತಿ, ಆಡುವಳ್ಳಿ ಹಾಸನ ಎಂದು ತಿಳಿಸಿರುತ್ತಾನೆ. ನಂತರ ಆತನನ್ನು ಮತ್ತು ವಾಹನವನ್ನು ಠಾಣೆಗೆ ಕರೆತಂದು ಚಾಸಾ.19 ರವರ ಮುಂದೆ ಹಾಜರುಪಡಿಸಿರುತ್ತೇವೆ. ದಿಃ 20.11.2013 ರಂದು ಚಾಸಾ.19 ರವರು, ತನ್ನನ್ನು ಮತ್ತು ಚಾಸಾ.16 ರವರೊಂದಿಗೆ ಆರೋಪಿಯೊಂದಿಗೆ, ಪಂಚರ ಸಮಕ್ಷಮ ಹಾಸನದ ಯತೀಶ್ ಜ್ಯುವೆಲ್ಲರ್ ಮತ್ತು ಮನೋಜ್ ಪಾನ್ ಬ್ರೋಕರ್ ಚಿನ್ನದ ಅಂಗಡಿಗೆ ಹೋಗಿದ್ದು, ಸದರಿ ಅಂಗಡಿಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ದಿಃ 21.11.2013 ರಂದು ತಾವುಗಳು ಹಾಸನದ ಶೋಭಾ ಜ್ಯುವೆಲ್ಲರ್ಸ್ ಗೆ ಹೋಗಿದ್ದು, ಅಲ್ಲಿ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ಅದೇ ದಿನ ಉತ್ತಮ್ ಜ್ಯುವೆಲ್ಲರ್ಸ್ ಗೆ ಹೋಗಿದ್ದು, ಅಲ್ಲಿ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ದಿಃ 22.11.2013 ರಂದು ಚಾಸಾ.19 ರವರು, ತನ್ನನ್ನು ಮತ್ತು ಚಾಸಾ.16 ರವರೊಂದಿಗೆ ಆರೋಪಿಯೊಂದಿಗೆ, ಪಂಚರ ಸಮಕ್ಷಮ ರಾಘವೇಂದ್ರ ಎಂಬುವವರ ಮನೆಗೆ ಭೇಟಿ ನೀಡಿ, ಒಂದು ಸೋನಿ ಟಿ.ವಿ, ಒಂದು ರಿಮೋಟ್ ಮತ್ತು ಒಂದು ಗ್ಯಾಸ್ ಸಿಲಿಂಡರನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಆ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವೇ ಆ ದಿನ ತಾವು ಬಂಧಿಸಿದ ವ್ಯಕ್ತಿಯಾಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಎಪಿಪಿ ರವರ ಪಾಟೀ ಸವಾಲಿನಲ್ಲಿ, ಆ ದಿನ ಚಾಸಾ.19 ರವರು ಆರೋಪಿಯಿಂದ ಒಂದು ಕಬ್ಬಿಣದ ರಾಡು ಮತ್ತು ಸ್ಕ್ರೂ ಡ್ರೈವರನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರ : ಸುಳ್ಳು**

**ಪ್ರಶ್ನೆ : 10.** ಪ್ರಾಸಾ.14 ರಾಜಾನಾಯ್ಕ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 18.11.2013 ರಂದು ತನ್ನನ್ನು ಮತ್ತು ಚಾಸಾ.15 ರವರನ್ನು ರಾತ್ರಿ ಗಸ್ತಿಗಾಗಿ ನೇಮಕ ಮಾಡಿದ್ದು, ಅದರಂತೆ ತಾನು ಮತ್ತು ಚಾಸಾ.15 ರವರು ದ್ವಿಚಕ್ರ ವಾಹನದಲ್ಲಿ ರಾತ್ರಿ 11.00 ಗಂಟೆ ಸಮಯಕ್ಕೆ ಬಿ.ಎಂ. ರಸ್ತೆ, ಬಸ್ ನಿಲ್ದಾಣ ಮತ್ತು ಮಕಾನ್ ಬಳಿ ಗಸ್ತು

ಮಾಡಿಕೊಂಡು, ಬೀಟ್ ಸಿಬ್ಬಂದಿಗಳನ್ನು ಪರಿಶೀಲಿಸಿ, ದಿಃ 19.11.2013 ರಂದು ಬೆಳಿಗ್ಗಿನ ಜಾವ 4.30 ಗಂಟೆಯಲ್ಲಿ ಮೈಸೂರು ರಸ್ತೆಯ ರೈಲ್ವೆ ಬ್ರಿಡ್ಜ್ ಬಳಿ ಹೋಗುತ್ತಿದ್ದಾಗ, ಒಬ್ಬ ಆಸಾಮಿಯು ಕೆಎ.13.ಜೆ.3510 ರ ಹೀರೋ ಹೋಂಡಾ ಮೋಟಾರು ಸೈಕಲನ್ನು ತಳ್ಳಿಕೊಂಡು ಬರುತ್ತಿದ್ದು, ಮೋಟಾರು ಸೈಕಲಿನ ದಾಖಲಾತಿ ಕೇಳಲಾಗಿ, ಆತ ಯಾವುದೇ ದಾಖಲಾತಿ ಇಲ್ಲ ಎಂದು ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದ್ದು, ತಾನು ಮತ್ತು ಚಾಸಾ.15 ರವರು ಆತನನ್ನು ಬೆನ್ನಟ್ಟಿ ಹಿಡಿದಿರುತ್ತೇವೆ. ಆತನ ಹೆಸರು ವಿಳಾಸ ಕೇಳಲಾಗಿ, ಆತನ ಹೆಸರು ಸತೀಶ ಬಿನ್ ಕೇವಶಮೂರ್ತಿ, ಸಮುದಾಯ ಭವನ, ಆಡುವಳ್ಳಿ, ಹಾಸನ ಎಂದು ತಿಳಿಸಿರುತ್ತಾನೆ. ನಂತರ ಸದರಿ ಮೋಟಾರು ಬೈಕಿನಲ್ಲಿ ಒಂದು ಸ್ಕ್ರೂ ಡ್ರೈವರ್ ಮತ್ತು ಕಬ್ಬಿಣದ ರಾಡು ಸಿಕ್ಕಿರುತ್ತದೆ. ನಂತರ ಆತನನ್ನು ಮತ್ತು ವಾಹನ ಮತ್ತು ಇತರ ವಸ್ತುಗಳನ್ನು ಠಾಣೆಗೆ ಕರೆತಂದು ಚಾಸಾ.19 ರವರ ಮುಂದೆ ಹಾಜರುಪಡಿಸಿ, ವರದಿ ಮಾಡಿಕೊಂಡಿರುತ್ತೇನೆ. ಆ ದಿನ ತಾವು ಬಂಧಿಸಿದ ವ್ಯಕ್ತಿಯೇ ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವೇ ಆಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ :** ಸುಳ್ಳು

**ಪ್ರಶ್ನೆ : 11.** ಪ್ರಾಸಾ.15 ಹೆಚ್.ಎಂ. ಶೈಲೇಂದ್ರ ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 30.09.2013 ರಂದು ಈ ಪ್ರಕರಣದ ಕಡತವನ್ನು ಸಿ ಪಿ ಐ ಮಾರಪ್ಪ ರವರಿಂದ ಪಡೆದುಕೊಂಡು, ಪರಿಶೀಲಿಸಿ, ತನಿಖೆ ಮುಂದುವರೆಸಿ ಆರೋಪಿ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುತ್ತೇನೆ. ದಿಃ 19.11.2013 ರಂದು ಚಾಸಾ. 17 ರವರು ರಾತ್ರಿ ಗಸ್ತಿನಲ್ಲಿರುವಾಗ ಒಬ್ಬ ವ್ಯಕ್ತಿಯನ್ನು ಹಿಡಿದು ವಿಚಾರಣೆ ಮಾಡಿ ತನ್ನ ಮುಂದೆ ಬೆಳಿಗ್ಗೆ ನಿಪಿ.17 ರಂತೆ ಒಂದು ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಆತನನ್ನು ವಿಚಾರ ಮಾಡಲಾಗಿ ಆತನ ಹೆಸರು ಸತೀಶ್ ಬಿನ್ ಕೇಶವಮೂರ್ತಿ ಎಂದು ತಿಳಿಸಿದ್ದು, ಆತನು ಹಲವಾರು ಪ್ರಕರಣದಲ್ಲಿ ಭಾಗಿಯಾಗಿರುವ ಬಗ್ಗೆ ತಿಳಿದು ಬಂದಿದ್ದು, ಆತನ ಬಳಿಯಿದ್ದ ಕೆಎ.13.ಜಿ.3510 ಬೈಕನ್ನು ಮತ್ತು ಸದರಿ ಬೈಕಿನಲ್ಲಿದ್ದ ಸ್ಕ್ರೂ ಡ್ರೈವರ್ ಮತ್ತು ಕಬ್ಬಿಣದ ರಾಡನ್ನು ತನ್ನ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಪಂಚರಾದ ಚಾಸಾ.4 ಮತ್ತು 5 ರವರ ಸಮಕ್ಷಮ ಮಹಜರ್ ಮಾಡಿ ಬೆಳಿಗ್ಗೆ 11 ರಿಂದ 12 ಗಂಟೆವರೆಗೆ ವಶಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಮು.ಮಾಲುಗಳನ್ನು ಠಾಣಾ ಮಾಲು

ಪಟ್ಟಿ ಸಂಖ್ಯೆಃ 298/2013 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಯಿತು. ಅದೇ ದಿನ ಚಾಸಾ.4 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 20.11.2013 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಮೇರೆಗೆ ಆತ ತಮ್ಮನ್ನು ಮತ್ತು ಚಾಸಾ.6 ಮತ್ತು 7 ರವರನ್ನು ಕರೆದುಕೊಂಡು ಹಾಸನದ ಕಡೆ ಹೊರಟು, ಆರೋಪಿ ಹಾಸನದ ಮಂಗಲ್ ದೀಪ್ ಜ್ಯುವೆಲ್ಲರ್ ಮತ್ತು ಪಾನ್ ಬ್ರೋಕರ್ ಅಂಗಡಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ವ್ಯಕ್ತಿಯನ್ನು ತೋರಿಸಿ, ಆತನನ್ನು ವಿಚಾರಿಸಲಾಗಿ ಆತನ ಹೆಸರು ಜಯಂತ್ ಬಿನ್ ಶಾಂತಿ ಲಾಲ್ ಸದರಿ ಅಂಗಡಿ ಮಾಲೀಕರಾಗಿರುತ್ತಾರೆ. ಆತನಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ಒಂದು ಜೊತೆ ಚಿನ್ನದ ಬೇಬಿ ಓಲೆ 2.160 ಗ್ರಾಂ ಮತ್ತು ಇತರೆ ಬೇರೆ ಪ್ರಕರಣಗಳಲ್ಲಿ ಚಿನ್ನಾಭರಣಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ನಿಪಿ.3 ರಂತೆ ಮಧ್ಯಾಹ್ನ 3.30 ರಿಂದ 5.00 ರವರೆಗೆ ಮಹಜರ್ ಮಾಡಿ, ನಂತರ ಠಾಣೆಗೆ ಹಿಂದಿರುಗಿ ಅಮಾನತ್ತು ಪಡಿಸಿಕೊಂಡ ಮು.ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆಃ 300/2013 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ :** ಸುಳ್ಳು

**ಪ್ರಶ್ನೆ : 12.** ಪ್ರಾಸಾ.15 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 21.11.2013 ರಂದು ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಮೇರೆಗೆ ಆತ ತಮ್ಮನ್ನು ಮತ್ತು ಚಾಸಾ 6 ಮತ್ತು 7 ರವರನ್ನು ಕರೆದುಕೊಂಡು ಹಾಸನದ ಕಡೆ ಹೊರಟು, ಆರೋಪಿ ಹಾಸನದ ಗಾಂಧಿ ಬಜಾರ್ ರಸ್ತೆಯಲ್ಲಿರುವ ಉತ್ತಮ್ ಜ್ಯುವೆಲ್ಲರ್ ಅಂಗಡಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಒಬ್ಬ ವ್ಯಕ್ತಿಯನ್ನು ತೋರಿಸಿ, ಆತನನ್ನು ವಿಚಾರಿಸಲಾಗಿ ಆತನ ಹೆಸರು ಉತ್ತಮ್ ಕುಮಾರ್ ಬಿನ್ ಪೂನ್ ಚಂದ್ ಸದರಿ ಅಂಗಡಿ ಮಾಲೀಕರಾಗಿರುತ್ತಾರೆ. ಆತನಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು 4.200 ಗ್ರಾಂ ತೂಕದ ಒಂದು ಜೊತೆ ಜೇಡ ಮತ್ತು ಹವಳದ ಚಿನ್ನದ ಓಲೆಯನ್ನು, 3.850 ಗ್ರಾಂ ನ ಒಂದು ಜೊತೆ ರೂಬಿ ಹರಳಿನ ಚಿನ್ನದ ಓಲೆ, 4.200 ಗ್ರಾಂ ತೂಕದ ಒಂದು ಜೊತೆ

ಜೇಡ ಹರಳಿನ ಚಿನ್ನದ ಓಲೆ, 3.200 ಗ್ರಾಂ ಒಂದು ಹವಳದ ಹರಳಿನ ಚಿನ್ನದ ಓಲೆ, 4.530 ಗ್ರಾಂ ಒಂದು ಬಿಳಿ ಹರಳಿನ ಚಿನ್ನದ ಉಂಗುರ, 1.980 ಗ್ರಾಂ ತೂಕದ ಕೆಂಪು ಮತ್ತು ಹಸಿರು ಹರಳಿನ ಎರಡು ಮಕ್ಕಳ ಉಂಗುರ, 8.980 ಗ್ರಾಂ ಒಂದು ಚಿನ್ನದ ನಕ್ಲೇಸ್ ಒಟ್ಟು 30.840 ಗ್ರಾಂ ಚಿನ್ನದ ಆಭರಣಗಳನ್ನು ಅವುಗಳನ್ನು ಪಂಚರ ಸಮಕ್ಷಮ ನಿಪಿ.7 ರಂತೆ ಸಂಜೆ 4.30 ರಿಂದ 7.00 ರವರೆಗೆ ಮಹಜರ್ ಮಾಡಿ, ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಹಿಂದಿರುಗಿ ಅಮಾನತ್ತು ಪಡಿಸಿಕೊಂಡ ಮು.ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆಃ 303/2013 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ. ನಂತರ ಚಾಸಾ.11 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ನಂತರ ಚಾಸಾ.1 ರವರ ಮುಂದುವರೆದ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿಃ 22.11.2013 ರಂದು ಚಾಸಾ.6, 7, 15, 16, ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 23.11.2013 ರಂದು ಆರೋಪಿಯನ್ನು ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿಃ 15.12.2013 ರಂದು ಮಾಲು ಪಟ್ಟಿ ಸಂಖ್ಯೆಃ 303/2013 ರಲ್ಲಿ ನಮೂದಿಸಿರುವ ಚಿನ್ನಾಭರಗಳನ್ನು ಚಾಸಾ.1 ರವರಿಗೆ ಘನ ನ್ಯಾಯಾಲಯದ ಆದೇಶದ ಮೇರೆಗೆ ಬೆಳಿಗ್ಗೆ 11.00 ಗಂಟೆಯಿಂದ 11.45 ರವರೆಗೆ ಚಾಸಾ. 13 ಮತ್ತು 14 ರವರ ಸಮಕ್ಷಮ ನಿಪಿ.13 ರಂತೆ ಮಹಜರ್ ಮಾಡಿ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ 13 ಮತ್ತು 14 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 20.12.2013 ರಂದು ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿಃ 26 04 2014 ರಂದು ಮಾಲು ಪಟ್ಟಿ ಸಂಖ್ಯೆಃ 300/2013 ರಲ್ಲಿ ನಮೂದಿಸಿರುವ ಒಂದು ಚಿನ್ನದ ಬೇಬಿ ಓಲೆಯನ್ನು ಚಾಸಾ.1 ರವರಿಗೆ ಘನ ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ : ಸುಳ್ಳು**

**ಪ್ರಶ್ನೆ : 13.** ಪ್ರಾಸಾ.16 ಸಿದ್ದೇಶ ಹೆಚ್.ಬಿ. ಇವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ, ದಿಃ 01.02.2013 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ನೀಡಿದ ಲಿಖಿತ ದೂರನ್ನು ಪಡೆದು, ಠಾಣಾ ಮೊಕದ್ದಮೆ

ಸಂಖ್ಯೆಃ 34/2013 ರಂತೆ ಪ್ರ.ವ ವರದಿಯನ್ನು ದಾಖಲಿಸಿ, ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಪ್ರ.ವ ವರದಿಯನ್ನು ತನ್ನ ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ತಾನು ಮತ್ತು ಶ್ವಾನ ದಳ ಮತ್ತು ಬೆರಳಚ್ಚು ತಜ್ಞರು ಘಟನಾ ಸ್ಥಳಕ್ಕೆ ಹೋಗಿದ್ದು, ಚಾಸಾ.1 ರವರು ತೋರಿಸಿದ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನಮ್ಮ ಸಿ.ಪಿ.ಐ ರವರಾದ ಮಾರಪ್ಪರವರಿಗೆ ಹಸ್ತಾಂತರಿಸಿರುತ್ತೇನೆ. ನಂತರ ಸದರಿ ಮಾರಪ್ಪನವರು ಮಹಜರ್ ಮಾಡುವಂತೆ ತನಗೆ ಮೌಖಿಕವಾಗಿ ತಿಳಿಸಿದ್ದು, ಅದರಂತೆ ದಿಃ 02.02.2013 ರಂದು ಚಾಸಾ.1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ.2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 9.15 ರಿಂದ 10.30 ರವರೆಗೆ ನಿಪಿ.2 ರಂತೆ ಮಹಜರ್ ಮಾಡಿರುತ್ತೇನೆ. ಪ್ರಕರಣವು ಘೋರ ಅಪರಾದವಾದ್ದರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನಮ್ಮ ಸಿ.ಪಿ.ಐ ರವರಾದ ಮಾರಪ್ಪರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ :** ಸುಳ್ಳು

**ಪ್ರಶ್ನೆ : 14.** ನೀವು ಏನಾದರೂ ಹೇಳಲು ಬಯಸುತ್ತೀರಾ ?

**ಉತ್ತರ :** ಇಲ್ಲ

**ಪ್ರಶ್ನೆ : 15 :** ನಿಮ್ಮ ಪ್ರತಿರಕ್ಷಣೆಗೆ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ?

**ಉತ್ತರ :** ಇಲ್ಲ

(ಮೇಲೆ ತಿಳಿಸಿದ ಎಲ್ಲಾ ವಿವರಗಳನ್ನು ಓದಿ, ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರಗಳನ್ನು ಸ್ವತಃ ನನ್ನ ಕೈ ಬರಹದಲ್ಲಿ ಬರೆದು ದೃಢೀಕರಿಸಿರುತ್ತೇನೆ.)

ದಿನಾಂಕಃ **19.03.2025**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.